ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಭತ್ಯೆಗಳಲ್ಲಿ 30% ಕಡಿಗೊಳಿಸವ ಬಗ್ಗೆ ಸ್ಪಷ್ಟೀಕರಣ

ಓದಲಾಗಿದೆ: The Karnataka Legislature Salaries, Pensions And Allowances And Certain Other Law (Amendment) Ordinance, 2020 ( Karnataka Ordinance No. 04 of 2020)

**ಪ್ರಸ್ತಾವನೆ:-**

ಮೇಲೆ ಓದಲಾಗಿರುವ (1)ರ The Karnataka Legislature Salaries, Pensions And Allowances And Certain Other Law (Amendment) Ordinance, 2020 ( Karnataka Ordinance No. 04 of 2020)ರ ಮೂಲಕ The Karnataka Legislature Salaries, Pension, and Allowances and Certain other law (Amendment) Ordinance, 2020 ಇದರಲ್ಲಿ Karnataka Legislature Salaries, Pension, and Allowances Act, 1956 ಮತ್ತು The Karnataka Ministers Salaries, Pension, and Allowances Act, 1956 ಇದನ್ನು ತಿದ್ದುಪಡಿ ಮಾಡಿ ಮುಖ್ಯಮಂತ್ರಿಗಳು, ರಾಜ್ಯ ಸಚಿವರು ಮತ್ತು ಉಪ ಮುಖ್ಯಮಂತ್ರಿಗಳು ಹಾಗೂ ವಿಧಾನ ಮಂಡಲದ ಉಭಯ ಸದನಗಳ ಸದಸ್ಯರು, ಸಭಾಪತಿಗಳು, ಉಪ ಸಭಾಪತಿಗಳು, ವಿಧಾನಸಭೆಯ ಸಭಾದ್ಯಕ್ಷರು ಮತು ವಿಧಾನ ಮಂಡಲದ ಇತರ ಪದಾಧಿಕಾರಿಗಳ ಸಂಭಳ ಮತ್ತು ಇತರ ಭತ್ಯೆಗಳ ಶೇಕಡಾ 30 ರಷ್ಟನ್ನು ದಿನಾಂಕ01.04.2020 ರಿಂದ ಒಂದು ವರ್ಷದ ಅವದಿಗೆ ಕಡಿತಗೊಳಿಸಬೇಕೆಂದು ಉಪಭಂದ ಕಲ್ಪಿಸಿದೆ.

ಈ ತಿದ್ದುಪಡಿಯಲ್ಲಿ ಮೇಲೆ ಹೇಳಲಾದ ಎಲ್ಲಾ ಪದಾಧಿಕಾರಿಗಳ ಮತ್ತು ಸದಸ್ಯರ ಸಂಬಳ ಮತ್ತು ಎಲ್ಲಾ ಭತ್ಯೆಗಳನ್ನು ಸಚಿವ ಸಂಪುಟದ ನಿರ್ಣಯದಂತೆ ಶೇಕಡಾ 30 ರಷ್ಟನ್ನು ಕಡಿತಗೊಳಿಸಿದೆ ಇದರಲ್ಲಿ ಭತ್ಯೆಗಳಲ್ಲಿ ವರ್ಗೀಕರಣ ಮಾಡಿರುವುದಿಲ್ಲ. ಆದರೆ, ವಿಧಾನ ಪರಿಷತ್ತಿನ ಕಾರ್ಯದರ್ಶಿಯವರು ವಿಧಾನ ಮಂಡಲದ ಸದಸ್ಯರು ನೀಡಲಾಗುವ ಭತ್ಯೆಗಳನ್ನು ಎರಡು ಭಾಗಗಳಾಗಿ ವಿಂಗಡಿಸಿ, ಅನುಭಂದ-1 ಮತ್ತು 2 ಎಂದು ವರ್ಗೀಕರಿಸಿ, ಅನುಭಂದ-1 ರಲ್ಲಿ ಇರುವ ಭತ್ಯೆಗಳಲ್ಲಿ ಶೇಕಡಾ 30ರಷ್ಟನ್ನು ಕಡಿತಗೊಳಿಸಲು ಕ್ರಮ ವಹಿಸಲಾಗುತ್ತಿದೆ.ಆದರೆ, ಅನುಭಂದ-2 ರಲ್ಲಿ ತರಲಾಗಿರುವ ಇತರ ಭತ್ಯೆಗಳನ್ನು ಶೇಕಡಾ 30 ರಷ್ಟು ಕಡಿತಗೊಳಿಸಿ ಪಾವತಿ ಮಾಡಬೇಕೆ ಎನುವುದರ ಬಗ್ಗೆ ಈ ಇಲಾಖೆಯ ಅಭಿಪ್ರಾಯ ಕೋರಿರುತ್ತಾರೆ.

ಮೇಲಿನ ತಿದ್ದುಪಡಿ ಅದ್ಯಾದೇಶದಲ್ಲಿ ಭತ್ಯೆಗಳ ವರ್ಗೀಕರಣ ಮಾಡಿ ಅನುಭಂದ-1 ಮತ್ತು 2 ರಲ್ಲಿನ ಭತ್ಯೆಗಳಿಗೆ ವ್ಯತ್ಯಾಸ ಮಾಡಿರುವುದಿಲ್ಲ. ಅನುಬಂಧ-2 ರಲ್ಲಿರುವ ಭತ್ಯೆಗಳನ್ನು ಶೇ.30ರಷ್ಟು ಕಡಿತಗೊಳಿಸುವುದರ ಬಗ್ಗೆ ಪರಿಶೀಲಿಸಿ, ಸೂಕ್ತ ಅಭಿಪ್ರಾಯ ನೀಡುವಂತೆ ಕಡತವನ್ನು ಆರ್ಥಿಕ ಇಲಾಖೆಯ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿತ್ತು.

ಆರ್ಥಿಕ ಇಲಾಖೆಯು, ಈ ಬಗ್ಗೆ ಆರ್ಥಿಕ ಇಲಾಖೆಯ ಯಾವುದೇ ಸ್ಪಷ್ಟ ಅಭಿಪ್ರಾಯವಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಅಭಿಪ್ರಾಯ ಪಡೆಯುವಂತೆ ಸಲಹೆ ನೀಡಿರುತ್ತಾರೆ.

ಆರ್ಥಿಕ ಇಲಾಖೆಯು ನೀಡಿರುವ ಅಭಿಪ್ರಾಯದ ಹಿನ್ನಲೆಯಲ್ಲಿ, ಆಡಳಿತಾತ್ಮಕ ನಿರ್ಣಯ ಕೈಗೊಳ್ಳುವ ಸಲುವಾಗಿ ಕಡತವನ್ನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಆದೇಶಕ್ಕಾಗಿ ಕಳುಹಿಸಲಾಗಿತ್ತು.

ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, "ಪ್ರಯಾಣ ಭತ್ಯೆ ಹಾಗೂ ದಿನ ಭತ್ಯೆಗಳು ಒಳಗೊಂಡಿರುವುದಿಲ್ಲ"ಎಂದು ಸೂಚಿಸಿರುತ್ತಾರೆ.

ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಹೊರತುಪಡಿಸಿ, ಇತರೆ ಭತ್ಯೆಗಳಲ್ಲಿ ಪ್ರಯಾಣ ಭತ್ಯೆ (Fixed travelling Allowance) ಗೆ ಶೇಕಡಾ 30 ರಷ್ಟು ಕಡಿಮೆಮಾಡಿ ಪಾವತಿ ಮಾಡಬಹುದಾಗಿದೆ.

ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಂವ್ಯಶಾಇ 3 ಸಂವ್ಯವಿ 2020, ಬೆಂಗಳೂರು, ದಿನಾಂಕ: 28.05.2020

ಕರ್ನಾಟಕ ವಿಧಾನ ಮಂಡಲದ ಸದಸ್ಯರ ವೇತನ, ಪಿಂಚಣಿ ಮತ್ತು ಇತರೆ ಭತ್ಯೆಗಳು ಹಾಗೂ ಇತರೆ ಕಾನೂನು (ತಿದ್ದುಪಡಿ) ಅಧ್ಯಾದೇಶ, 2020 ರ ಉಪಬಂಧದ ರೀತ್ಯಾ ಸಂಬಳ, ದೂರವಾಣಿ ವೆಚ್ಚ, ಚುನಾವಣಾ ಕ್ಷೇತ್ರ ಭತ್ಯೆ, ಅಂಚೆ ವೆಚ್ಚ, ಕೊಠಡಿ ಸೇವಕರ ಭತ್ಯೆ, ಚುನಾವಣಾ ಕ್ಷೇತ್ರ ಪ್ರಯಾಣ ಭತ್ಯೆ, ನಿಗದಿತ (fixed) ವಿಮಾನ ಮತ್ತು ರೈಲ್ವೆ ಪ್ರಯಾಣ ಭತ್ಯೆ (ವಾರ್ಷಿಕ) ಇವುಗಳಲ್ಲಿ 30% ಕಡಿತಗೊಳಿಸಬಹುದಾಗಿದೆ.

ಸಭೆಗಳಿಗೆ ಹಾಜರಾಗಲು ದಿನ ಭತ್ಯೆ (ರಾಜ್ಯದೊಳಗೆ), ಸಭೆಗಳಿಗೆ ಹಾಜರಾಗಲು ದಿನ ಭತ್ಯೆ (ರಾಜ್ಯದ ಹೊರಕ್ಕೆ), ಪ್ರಯಾಣ ಭತ್ಯೆ, ವಾಹನ ಭತ್ಯೆ (ಪ್ರತಿ ಕಿ.,ಮಿ.ಗೆ) ಇವುಗಳನ್ನು ಹೊರತುಪಡಿಸಬೇಕೆಂದು ಸರ್ಕಾರ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

( ಕೆ. ದ್ವಾರಕನಾಥಬಾಬು)
ಸರ್ಕಾರದ ಕಾರ್ಯದರ್ಶಿ ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ